# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಲೋಕಾಯುಕ್ತ ಪ್ರಕರಣಗಳ ವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ

**Spl. C(Courrption) 9/2014**

ಪ್ರಾಸಾಃ **4** ಚಾಸಾಃ **9**
ದಿನಾಂಕಃ **26-09-2023**

## ಸಾಕ್ಷಿ ಕ್ರಮವಾಗಿ ಪ್ರಮಾಣ ವಚನ ಮಾಡಿದರು

| | |
|---|---|
| ಹೆಸರು | ಃ- ಎಂ ಸಿ ಜಯಲಕ್ಷ್ಮೀ |
| ಗಂಡನ ಹೆಸರು | ಃ- ಸದಾಶಿವಾನಂದ ಕೆ ಎಂ |
| ವಯಸ್ಸು | ಃ- 57 |
| ಉದ್ಯೋಗ | ಃ- ಸೂಪರಿನ್‌ಟೆಂಡೆಂಟ್, ಅರಣ್ಯ ಇಲಾಖೆ, ಚಿಕ್ಕಬಳ್ಳಾಪುರ |
| ವಾಸ ಸ್ಥಳ | ಃ- ಚಿಕ್ಕಬಳ್ಳಾಪುರ |

## ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ

ನಾನು 2008 ರಿಂದ 2015 ರವರಿಗೂ ಜಲಾಯನ ಅಬಿವೃದ್ಧಿ ಇಲಾಖೆ ಕೋಲಾರದಲ್ಲಿ ಪ್ರಥಮ ದರ್ಜೆ ಸಹಾಯಕಳಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕಃ 22-11-2012 ರಂದು 05-00 ಘಂಟೆಗೆ ಲೋಕಾಯುಕ್ತ ಪೊಲೀಸರು ನಮ್ಮ ಕಚೇರಿಗೆ ಬಂದಿದ್ದರು. ನಮ್ಮ ಮೇಲಾಧಿಕಾರಿಗಳಾದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ತಿಳಿಸಿ, ನನ್ನನ್ನು ಕರ್ತವ್ಯದ ಮೇರೆಗೆ ಲೋಕಾಯುಕ್ತ ಕಚೇರಿಗೆ ಕಳುಹಿಸಿಕೊಟ್ಟರು. ಆಗ ಲೋಕಾಯುಕ್ತ ಸಬ್-ಇನ್ಸ್‌ಪೆಕ್ಟರ್ ಅಲ್ಲಿದ್ದರು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಕ್ರಮವಾಗಿ ಹಣ ದುರುಪಯೋಗವಾಗಿರುವ ಬಗ್ಗೆ ಒಬ್ಬರ ಮನೆಗೆ ಶೋಧನೆ ಮಾಡಬೇಕಾಗಿದೆ ಎಂದು ತಿಳಿಸಿರುತ್ತಾರೆ. ಅಲಿಲಗೆ ಆ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಇಲಾಖೆಯಿಂದ ಕೃಷ್ಣಮೂರ್ತಿ ದ್ವಿತೀಯ ದರ್ಜೆ ಇಲಾಖೆಯವರು ಅಲ್ಲಿಗೆ ಬಂದಿದ್ದರು. ಲೋಕಾಯುಕ್ತ ಸಬ್-ಇನ್ಸ್‌ಪೆಕ್ಟರ್ ರವರು ಮರು ದಿವಸ ಬೆಳಗ್ಗೆ 05-00 ಘಂಟೆಗೆ ಲೋಕಾಯುಕ್ತ ಕಚೇರಿಗೆ ಬರಲು ಹೇಳಿದರು.

ನಾವು ಮಾರನೇ ದಿವಸ ಬೆಳಗಿನ 05-00 ಘಂಟೆಗೆ ಲೋಕಾಯುಕ್ತ ಕಚೇರಿಗೆ ಹೋದೆನು ಆವಾಗ ಕೃಷ್ಣಮೂರ್ತಿ, ಸಬ್-ಇನ್ಸ್-ಪೆಕ್ಟರ್ ಗೌತಮ್ ಹಾಗೂ ಇತರೆ ಪೊಲೀಸರು ಎಲ್ಲಾ ಇದ್ದರು. ನಂತರ ನಮ್ಮನ್ನು ಕಿಲಾರಿಪೇಟೆಯ ರಾಮದೇವರ ಗುಡಿಯ ಬಳಿ ಇರುವ ಮಂಜುನಾಥನವರ ಮನೆಗೆ ಕರೆದುಕೊಂಡರು ಹೋಗಿ, ಮನೆಯ ಬೆಲ್ ಸಬ್-ಇನ್ಸ್-ಪೆಕ್ಟರ್ ಮಾಡಿದರು. ಆವಾಗ ಸದರಿ ಮಂಜುನಾಥ ಮನೆಯ ಹೊರಗಡೆ ಬಂದರು. ಸಬ್-ಇನ್ಸ್-ಪೆಕ್ಟರ್ ಮನೆ ಜಪ್ತಿ ಮಾಡಲು ವಾರೆಂಟನ್ನು ತೋರಿಸಿದರು. ಸದರಿ ಸರ್ಚ್ ವಾರೆಂಟಿಗೆ ನಾನು, ಮಂಜುನಾಥ ಹಾಗೂ ಕೃಷ್ಣಮೂರ್ತಿ ಸಹಿ ಮಾಡಿರುತ್ತೇವೆ. ಸರ್ಚ್ ವಾರೆಂಟನ್ನು ನಿಪಿ-239 ಎಂದು, ಸಾಕ್ಷಿ ಸಹಿಯನ್ನು ನಿಪಿ-239(ಎ) ಎಂದು ಮಂಜುನಾಥನ ಸಹಿಯನ್ನು ನಿಪಿ-239(ಬಿ) ಎಂದ, ಕೃಷ್ಣಮೂರ್ತಿಯ ಸಹಿಯನ್ನು ನಿಪಿ-239(ಸಿ) ಎಂದು ಗುರುತಿಸಲಾಯಿತು.

ಸಬ್-ಇನ್ಸ್-ಪೆಕ್ಟರ್ ರವರು ಆತನ ಮನೆಯನ್ನು ಪರಿಶೀಲನೆ ಮಾಡಿದರು. ಮನೆಯ ಮುಂದುಗಡೆ ದ್ವಿಚಕ್ರ ವಾಹನ ಹೋಂಡಾ ಆಕ್ಟೀವಾ ನೋಂದಾವಣಿ ಸಂಖ್ಯೆ ಕೆಎ-07-ಆರ್-2683 ನಿಲ್ಲಿಸಿತ್ತು. ಸದರಿ ದ್ವಿಚಕ್ರ ವಾಹನದ ಸೀಟಿನ ಡಿಕ್ಕಿಯಲ್ಲಿ 12 ದಾಖಲೆಗಳು ಇದ್ದವು. ಅದರೊಳಗೆ ವೇದಾ ಸೌಹಾರ್ಧ ಸೊಸೈಟಿಗೆ ಸಂಬಂಧಪಟ್ಟ ದಾಖಲೆಗಳು ಇದ್ದವು. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ 10 ದಾಖಲೆಗಳನ್ನು ಒಟ್ಟಾರೆಯಾಗಿ ನಿಪಿ-240 ಎಂದು, ಎಲ್ಲಾ ದಾಖಲೆಗಳಲ್ಲಿ ಸಾಕ್ಷಿಯ ಸಹಿಗಳು ಇರುತ್ತವೆ.

ನಂತರ ಮನೆಯ ಮಹಡಿಯ ಮೇಲೆ ಒಂದು ಒಂದು ಸಣ್ಣ ರೂಮಿನಲ್ಲಿ ಅಲಮಾರ ಇತ್ತು, ಸದರಿ ಅಲಮಾರದ ಕೀಯನ್ನು ಮಂಜುನಾಥ ಹಾಜರು ಪಡಿಸಿದ್ದು, ಅಲಮಾರದಲ್ಲಿ 1 ರಿಂದ 37 ದಾಖಲೆಗಳು ಇದ್ದವು. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಕಚೇರಿಯ ಪತ್ರಗಳ ಪ್ರತಿಗಳನ್ನು ನಿಪಿ241, ನಿಪಿ-242, ನಿಪಿ-243, ಎಂದು, ಸಾಕ್ಷಿ ಸಹಿಗಳನ್ನು ನಿಪಿ-241(ಎ), ನಿಪಿ-242(ಎ), ನಿಪಿ-243(ಎ) ಎಂದು ಗುರುತಿಸಲಾಯಿತು. ಮನೆಯ ದಾಖಲೆಗಳು, ಚೆಕ್ ಪುಸ್ತಕಗಳು, ಎಸ್.ಬಿ.ಎಂ., ಬ್ಯಾಂಕ್ ದಾಖಲೆಗಳು,

ಸಿಂಡಿಕೇಟ್ ಬ್ಯಾಂಕ್ ಎಟಿಎಂ ಕಾರ್ಡ್-ಗಳು, ಹೆಚ್.ಡಿ.ಎಫ್-.ಸಿ ಬ್ಯಾಂಕ್ ದಾಖಲೆಗಳು, ಸಿಂಡಿಕೇಟ್ ಬ್ಯಾಂಕ್-ನ ಚೆಕ್ ಪುಸ್ತಕಗಳು, ಪಾಸ್ ಪುಸ್ತಕಗಳು, ಎರಡು ಕ್ರಯ ಪತ್ರಗಳು, ಒಂದು ಕ್ರಯದ ಕರಾರು ಪತ್ರ ಶುದ್ಧ ಕ್ರಯಪತ್ರ ಗಳನ್ನು ಒಟ್ಟಾರೆಯಾಗಿ ನಿಪಿ-244 ಎಂದು, ಸಾಕ್ಷಿಯ ಸಹಿಯನ್ನು ನಿಪಿ-244(ಎ) ಎಂದು ಗುರುತಿಸಲಾಯಿತು.

ಸದರಿ ಮನೆಯ ಒಳಗಡೆ ನೆಲಮಹಡಿಯನ್ನು ಕೂಡ ಶೋಧನೆ ಮಾಡಿದಾಗ ಬಂಗಾರ ಸುಮಾರು 68 ಗ್ರಾಮ್, ಬೆಳ್ಳಿ 468 ಗ್ರಾಮ್ ಸಿಕ್ಕಿರುತ್ತವೆ. ಅಲ್ಲಿಗೆ ಅಕ್ಕಸಾಲಿಗರನ್ನು ಕರೆಸಲಾಯಿತು. ಅದನ್ನು ತೂಕ ಮಾಡಿ, ಬೆಳ್ಳಿ ಬಂಗಾರದ ವಸ್ತುಗಳನು ಮಂಜುನಾಥನಕೈಗೆ ಕೊಟ್ಟಿರುತ್ತಾರೆ. ಆ ಸಂದರ್ಭದಲ್ಲಿ ಮಾಡಿದ ಮಹಜರಿಗೆ ಸಹಿ ಮಾಡಿರುತ್ತೇನೆ. ಸದರಿ ಶೋಧನ ಪಂಚನಾಮೆಯನ್ನು ನಿಪಿ-245 ಎಂದು, ಕೊನೆಯ ಪುಟದಲ್ಲಿಯ ಸಾಕ್ಷಿ ಸಹಿಯನ್ನು ನಿಪಿ-245(ಎ) ಎಂದು, ಕೃಷ್ಣಮೂರ್ತಿ ಸಹಿಯನ್ನು ನಿಪಿ-245(ಬಿ) ಎಂದು, ಮಂಜುನಾಥನ ಸಹಿಯನ್ನು ನಿಪಿ-245(ಸಿ) ಎಂದು ಅನುಕ್ರಮವಾಗಿ ಗುರುತಿಸಲಾಯಿತು ಸದರಿ ಮಹಜರಿನ ಎಲ್ಲಾ ಪುಟಗಳಿಗೂ ನಾನು ಸಹಿ ಮಾಡಿರುತ್ತೇನೆ. ನಂತರ ಲೋಕಾಯುಕ್ತ ಕಚೇರಿಗೆ ವಾಪಸ್ಸು ಬಂದೆವು. ನಾನು, ಮಂಜುನಾಥ, ಕೃಷ್ಣಮೂರ್ತಿ, ಸಬ್-ಇನ್ಸ್-ಪೆಕ್ಟರ್ ಎಲ್ಲರೂ ಬಂದೆವು.

ನಂತರ ಸಂಜೆ 05-00 ಘಂಟೆ ಹೊತ್ತಿಗೆ ಸಬ್-ಇನ್ಸ್-ಪೆಕ್ಟರ್ ರವರು ಆರೋಪಿ ಮಂಜುನಾಥನ ಬರವಣಿಗೆಯನ್ನು ಬಿಳಿ ಹಾಳೆಯಲ್ಲಿ ನಿಲ್ಲಿಸಿ, ಒಟ್ಟು ಐದು ಪುಟಗಳ ಬರವಣಿಗೆ ಹಾಗೂ ಕೂರಿಸಿ ಐದು ಪುಟಗಳ ಬರವಣಿಗೆ ಮಾಡಿದರು, ಸಹಿಗಳನ್ನು ಕೂಡ ತೆಗೆದುಕೊಂಡರು. ಸದರಿ ದಾಖಲೆಗಳನ್ನು ಒಟ್ಟಾರೆಯಾಗಿ ನಿಪಿ-246 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಮಂಜುನಾಥ ಹಾಗೂ ಸಬ್-ಇನ್ಸ್-ಪೆಕ್ಟರ್ ಸಹಿ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಕಚೇರಿಯಲ್ಲಿ ಮಹಜರ್ ಕೂಡ ಮಾಡಿರುತ್ತಾರೆ. ನಾನು, ಕೃಷ್ಣಮೂರ್ತಿ, ಸಬ್-ಇನ್ಸ್-ಪೆಕ್ಟರ್ ಎಲ್ಲಾ ಸಹಿ ಮಾಡಿರುತ್ತೇವೆ. ಸದರಿ ಮಹಜರನ್ನು ನಿಪಿ-247 ಎಂದು, ಸಾಕ್ಷಿ ಸಹಿಯನ್ನು ನಿಪಿ-247(ಎ) ಎಂದು, ಕೃಷ್ಣಮೂರ್ತಿಯ ಸಹಿಯನ್ನು ನಿಪಿ-247(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

sd/-

(ಶುಕ್ಲಾಕ್ಷ ಪಾಲನ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.